# ಹುಳಿ ಹುಳಿ.. ಬೀಂಪುಳಿ!

■ ಗೀತಸದಾ, ಮೋಂತಿಮಾರು





ಬೀಂಪುಳಿ ಎಂದೊಡನೆ ಇದರ ಹುಳಿರುಚಿ ಹಾಗೂ ಬಾಲ್ಯದಲ್ಲಿ ಉಪ್ಪು ಸೇರಿಸಿ ಸವಿದ ನೆನಪಾಗಿ ನಾಲಿಗೆಯಡಿಯಲ್ಲಿ ಛಳ್ ಎಂದು ನೀರೂರುತ್ತದೆ. ಹಸಿರು ಬಣ್ಣದ ಮೃದು ಹಾಗೂ ರಸಭರಿತವಾದ ಈ ಹಣ್ಣು ಮಕ್ಕಳಿಗಂತು ಬಲು ಪ್ರಿಯ. ಉಪ್ಪು, ಖಾರ ಸೇರಿಸಿ ಮೆಲ್ಲುವ ಮಜಾನೇ ಮಜಾ! ವೇ ಅದ್ಭುತ. ಮರದ ಕಾಂಡ ಹಾಗೂ ಬೊಡ್ಡೆಯಲ್ಲಿ ಜೊಂಪೆ ಜೊಂಪೆಯಾಗಿ ಬಿಡುವ ಇದು ನೋಡಲು ಬಹಳ ಆಕರ್ಷಕ. ಜೊಂಬುಳಿ, ಬಿಂಬುಳಿ ಹೀಗೆ ಸ್ಥಳೀಯವಾಗಿ ಕರೆಯುವ ಇದಕ್ಕೆ ಜಿಲಿಂಬಿ ಎಂದೂ ಹೆಸರಿದೆ. ಅಕ್ಸಾಲಿಡೇಸಿ ಕುಟುಂಬಕ್ಕೆ ಸೇರಿದ ಇದರ ಸಸ್ಯಶಾಸ್ತ್ರೀಯ ಹೆಸರು 'ಅವೆರ್‌ಹೋವಬಿಲಿಂಬಿ'.

ಹಣ್ಣಿನ ತೋಟದಲ್ಲಿ, ಉದ್ಯಾನವನದಲ್ಲಿ ಹೆಚ್ಚಾಗಿ ಕಂಡು ಬರುವ ಹುಳಿ ರುಚಿಯ ಈ ಹಣ್ಣು ಉಷ್ಣವಲಯದ ಬೆಳೆಯಾಗಿದ್ದು, ಕರಾವಳಿ ಮತ್ತು ಮಲೆನಾಡಿನ ಉದ್ದಕ್ಕೂ ಕಂಡುಬರುತ್ತದೆ. ಸಾಮಾನ್ಯ ಎತ್ತರದ ಈ ಹಣ್ಣಿನ ಮರದಲ್ಲಿ ಮಳೆಗಾಲ ಮುಗಿಯುವ ಮತ್ತು ಬೇಸಿಗೆ ಕಾಲದಲ್ಲಿ ಹೂವು ಹಾಗೂ ಕಾಯಿಗಳನ್ನು ಕಾಣಬಹುದು. ಗೊಂಚಲು ಗೊಂಚಲುಗಳಾಗಿ ಕಡುಕೆಂಪು ಬಣ್ಣದ ಹೂವುಗಳು ಮತ್ತು ಎಳೆಹಸಿರು ಬಣ್ಣದ ಕಾಯಿಗಳಿಂದ ತುಂಬಿದ ಮರ ಎಂಥವರನ್ನೂ ತನ್ನತ್ತ ಸೆಳೆಯುತ್ತದೆ. ಬೀಜದಿಂದ ಅಥವಾ ಕಸಿ ವಿಧಾನದಿಂದ ಸಸ್ಯಾಭಿವೃದ್ಧಿ ಮಾಡಬಹುದಾದ ಈ ಸಸ್ಯದಲ್ಲಿ ನಾಟಿ ಮಾಡಿದ ನಂತರ ನಾಲ್ಕು ವರ್ಷಗಳಲ್ಲಿ ಫಲ ಪಡೆಯಬಹುದು.

ಅಡುಗೆಯಲ್ಲಿ ಹುಣಸೆ ಹಣ್ಣಿನ ಬದಲಿಗೆ ಬಳಸಬಹುದಾದ ಈ ಹಣ್ಣನ್ನು ಉಪಯೋಗಿಸಿ ಹಲವಾರು ನಮೂನೆಯ ಸವಿರುಚಿಗಳನ್ನು ತಯಾರಿಸಬಹುದು. ಜ್ಯೂಸ್, ಜ್ಯಾಮ್ ಇತ್ಯಾದಿಗಳನ್ನು ತಯಾರಿಸಬಹುದಾದ ಈ ಹಣ್ಣು ಹೆಚ್ಚಾಗಿ ಉಪ್ಪಿನಕಾಯಿ ತಯಾರಿಕೆಯಲ್ಲಿ ಬಳಕೆಯಾಗುತ್ತದೆ. ಹಳ್ಳಿಯಲ್ಲಿ ಹಲಸಿನಸೊಳೆ ಮತ್ತು ಮಾವಿನಕಾಯಿಗಳನ್ನು ಉಪ್ಪಿನ ದ್ರಾವಣದಲ್ಲಿ ಶೇಖರಿಸಿಡುವಾಗ ತೊಳೆ ತಾಜಾ ಇರಲು ಜೊತೆಗೆ ಬಿಂಬುಳಿಯನ್ನು ಕತ್ತರಿಸಿ ಸೇರಿಸುತ್ತಾರೆ. ಹಿತ್ತಾಳೆ, ತಾಮ್ರದ ಪಾತ್ರೆಗಳ ಹೊಳಪಿಗಾಗಿ ಬೀಂಪುಳಿ ಉಪಯೋಗಿಸಿ ತೊಳೆಯುತ್ತಾರೆ. ಬಟ್ಟೆಗಳ ಮೇಲಿನ ಕಲೆಗಳನ್ನು ಹೋಗಲಾಡಿಸಲೂ ಇದನ್ನು ಬಳಸುತ್ತಾರೆ.

ಹಲವಾರು ವರ್ಷ ಬದುಕಿ ಹಣ್ಣು ಕೊಡುವ ಈ ಗಿಡ ಎಲ್ಲಾ ಬಗೆಯ ಮಣ್ಣಿನಲ್ಲೂ ಚೆನ್ನಾಗಿ ಬೆಳೆಯುತ್ತದೆ. ತೋಟದಲ್ಲಿ ಬದಿಗಳಲ್ಲಿ, ಹಿತ್ತಲಲ್ಲಿ, ಮನೆಯಂಗಳದಲ್ಲಿ, ಕೈತೋಟದಲ್ಲಿ ಬೆಳೆಸಿ ಅಂದ ಹೆಚ್ಚಿಸುವುದರ ಜೊತೆಗೆ ವಿವಿಧ ಪ್ರಯೋಜನಗಳನ್ನೂ ಹೊಂದಬಹುದು.